# ಸಿನಿಮಾ ಮಾಯಾಲೋಕ

ಕನ್ನಡ ಚಲನಚಿತ್ರರಂಗ ಅರವತ್ತು, ಎಪ್ಪತ್ತರ ದಶಕದಲ್ಲಿ ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದ ಬದುಕಿನ ವಾಸ್ತವಗಳನ್ನು ಸಮರ್ಥವಾಗಿ ಚಿತ್ರಿಸಿದೆ. ಕೂಡುಕುಟುಂಬ, ಕೃಷಿಕರು, ಕಾರ್ಮಿಕರು ಹಾಗೂ ಅಸಹಾಯಕ ಕುಟುಂಬಗಳ ನಿತ್ಯ ಬದುಕಿನ ಬಯಕೆಗಳನ್ನು, ಅಲ್ಲಿನ ಸಂಘರ್ಷಗಳನ್ನು ತನ್ನ ಅರಿವಿಗೆ ತಾಕಿದಷ್ಟು ಪರಿಣಾಮಕಾರಿಯಾಗಿಯೇ ತೋರಿಸಿದೆ. ಈ ಮೂಲಕ ಕನ್ನಡ ಜನತೆಯ ಅಗಾಧ ಒಲವನ್ನು ಗಳಿಸಿಕೊಂಡಿದ್ದು ತಿಳಿದಿರುವ ಸಂಗತಿ. ಜಾನಪದ, ಪುರಾಣ ಹಾಗೂ ಕೌಟುಂಬಿಕ ಸಂಬಂಧಗಳ ಸುತ್ತ ನಿರ್ಮಾಣಗೊಳ್ಳುತ್ತಿದ್ದ ಚಲನಚಿತ್ರಗಳನ್ನು ಕನ್ನಡ ಪ್ರೇಕ್ಷಕರು ಸಂದೇಹರಹಿತವಾಗಿ ಸ್ವೀಕರಿಸಿದ್ದರು. ಜೊತೆಗೆ ಚಲನಚಿತ್ರರಂಗ ತನ್ನ ಸಾಮಾಜಿಕ ಬದ್ಧತೆಯನ್ನೂ ಸಂದರ್ಭ ಬಂದಾಗ ವ್ಯಕ್ತಪಡಿಸುತ್ತಿತ್ತು. ಮನರಂಜನೆಯ ಜೊತೆಗೆ ಆದರ್ಶದ ಗುಣಗಳನ್ನೇ ಬಿಂಬಿಸಬೇಕು ಎನ್ನುವುದು ಜನತೆಯ ಮನಸ್ಸಿನಾಳದ ಬಯಕೆಯಾಗಿತ್ತು. ಆದ್ದರಿಂದಲೇ ಆ ಕಾಲಘಟ್ಟದ ಚಲನಚಿತ್ರಗಳು, ಮೊದಲಲ್ಲಿ ಸುಂದರವಾಗಿದ್ದು, ನಡುವೆ ಸಂಘರ್ಷಗಳು, ವಿಘಟನೆಗಳು, ಅಪನಂಬಿಕೆ, ವಿದ್ರೋಹದ ಶಕ್ತಿಗಳನ್ನು ಜಯಿಸುತ್ತಾ ಕೊನೆಯಲ್ಲಿ ಕೂಡುಕುಟುಂಬದ ಒಗ್ಗೂಡುವಿಕೆಯಿಂದ 'ಶುಭಂ' ಎಂದು ಮುಕ್ತಾಯವಾಗುತ್ತಿದ್ದವು.

ಅಂದಿನ ಬಹುಪಾಲು ಚಲನಚಿತ್ರಗಳಲ್ಲಿ ದ್ವಂದ್ವಾರ್ಥಗಳು, ಇಂದು ನಾವು ನೋಡುತ್ತಿರುವ ಗಂಡು–ಹೆಣ್ಣಿನ ನಡುವಿನ ಅಶ್ಲೀಲತೆ, ಹೆಣ್ಣಿನ ದೇಹವನ್ನು ಮಾರಾಟದ ಸರಕಿನಂತೆ ತೋರಿಸುತ್ತಿರುವ ಯುಕ್ತವಲ್ಲದ ದೃಶ್ಯಗಳು ಈಗಿನಷ್ಟು ಸಭ್ಯತೆಯ ಎಲ್ಲೆ ಮೀರಿರಲಿಲ್ಲ. ಅಲ್ಲಿ ವ್ಯಕ್ತವಾಗುತ್ತಿದ್ದ ಪ್ರೇಮ ಸಂಬಂಧಗಳು ಎಷ್ಟು ಮಧುರವಾಗಿದ್ದವು ಎಂದರೆ, ಅದನ್ನು ನೋಡಿದ ಯಾರ ಮನಸ್ಸೂ ವಿಚಲಿತವಾಗುತ್ತಿರಲಿಲ್ಲ! ಮಹಿಳೆಯ ಮೇಲೆ ಮಾನಭಂಗದ ದೃಶ್ಯಗಳು ಅಸಹನೀಯ ಎನ್ನುವಷ್ಟು ಇರುತ್ತಿರಲಿಲ್ಲ. 'ತುಂಬಿದ ಕೊಡ' ಚಿತ್ರದಲ್ಲಿ ಕೆ.ಎಸ್. ನರಸಿಂಹಸ್ವಾಮಿ ಅವರ ಹಾಡಿಗೆ ಡಾ. ರಾಜಕುಮಾರ್ ಮತ್ತು ಲೀಲಾವತಿ ಅವರು ವ್ಯಕ್ತಪಡಿಸುತ್ತಿದ್ದ ಕಣ್ಣಿನ ಭಾಷೆ, 'ವೀರಕೇಸರಿ' ಚಿತ್ರದ ರಾಜಕುಮಾರ್ ಮತ್ತು ಲೀಲಾವತಿ ಅವರ ಮನಸ್ಸನ್ನು ಚೈತನ್ಯಗೊಳಿಸುವ ಹಾಡು, 'ಗೌರಿ', 'ಕನ್ಯಾರತ್ನ' 'ಸಾಕುಮಗಳು', 'ಮಿಸ್ ಲೀಲಾವತಿ', 'ಸಾಕ್ಷಾತ್ಕಾರ', 'ಕುಲವಧು', 'ನಾಂದಿ' ಇಂತಹ ಎಷ್ಟೋ ಚಿತ್ರಗಳಲ್ಲಿ ಅಶ್ಲೀಲತೆಯ ಸೋಂಕಿಲ್ಲದ, ದ್ವಂದ್ವಾರ್ಥಗಳಿಲ್ಲದೆ ಕೇಳಿ ಬರುತ್ತಿದ್ದ ಪ್ರೇಮ ಸಂಬಂಧವಾದ ಹಾಡುಗಳನ್ನು, ದೃಶ್ಯಗಳನ್ನು ಪ್ರೇಕ್ಷಕರು ಕಸಿವಿಸಿ ಇಲ್ಲದೆ ಕುಟುಂಬ ಸಮೇತ ಆಸ್ವಾದಿಸುತ್ತಿದ್ದರು. ಅಂದು 'ಸತ್ಯ ಹರಿಶ್ಚಂದ್ರ', 'ರಾಮಾಂಜನೇಯ ಯುದ್ಧ', 'ರತ್ನಗಿರಿ ರಹಸ್ಯ' ಜೊತೆಗೆ ತೆಲುಗಿನ ಎನ್.ಟಿ. ರಾಮರಾವ್ ಅವರ ಪೌರಾಣಿಕ ಚಿತ್ರಗಳನ್ನು ನೋಡಲು ಹಳ್ಳಿಗಾಡುಗಳಿಂದ ಜನ ಗಾಡಿ ಕಟ್ಟಿಕೊಂಡು ಬರುತ್ತಿದ್ದರು. ಅಕಿರಾ ಕುರೋಸಾವ 'ಸಾಹಿತ್ಯ ಮಾತ್ರವಲ್ಲ, ಎಲ್ಲ ಕಲೆಗಳು ವ್ಯಕ್ತಿ ಪ್ರಬುದ್ಧತೆಯತ್ತ ಸಾಗಿದಂತೆ ಮಾನವೀಯತೆ ಎಂಬುದು ಹೆಚ್ಚು ಆಳವಾಗಿ ಅರಿವಾಗಲಾರಂಬಿಸುತ್ತದೆ' ಎಂದು ಹೇಳಿದ.

ಎನ್. ಲಕ್ಷ್ಮೀನಾರಾಯಣ್ ಅವರ 'ನಾಂದಿ' ಚಿತ್ರವನ್ನು ನೋಡಿದ ತಮಿಳು ಸಿನಿಮಾ ವಿಮರ್ಶಕರೊಬ್ಬರು 'ಕನ್ನಡ ಚಿತ್ರೋದ್ಯಮ ಇಷ್ಟೊಂದು ಅಂದರೆ, ಹೆಚ್ಚು ಕಡಿಮೆ ಬಂಗಾಳದಷ್ಟೇ ಮುಂದುವರೆದಿರುವುದು ಆಶ್ಚರ್ಯಕರ...' ಎಂದರಂತೆ (ಡಾ. ರಾಜಕುಮಾರ್ ಸಮಗ್ರ ಚರಿತ್ರೆ: ದೊಡ್ಡಹುಲ್ಲೂರು ರುಕ್ಕೋಜಿ). ಇದಕ್ಕೆ ಕಾರಣ ಆ ಕಾಲದ ನಿರ್ದೇಶಕರು ಕನ್ನಡ ಸಾಹಿತ್ಯ ಪರಂಪರೆ ಹಾಗೂ ಸಮಾಜ ಮತ್ತು ಕುಟುಂಬಗಳ ಮನಸ್ಸನ್ನು ಆಳವಾಗಿ ಅರಿತವರಾಗಿದ್ದರು. ಆದ್ದರಿಂದ ಆ ಕಾಲದ ಚಲನಚಿತ್ರಗಳು ಸಮಾಜದ ಗುಣಲಕ್ಷಣಗಳನ್ನು ಬಿಂಬಿಸುವ ಹಾಗೂ ಮಾನವೀಯ ಆದರ್ಶಗಳನ್ನು ಎತ್ತಿಹಿಡಿಯುವಲ್ಲಿ ಮುಂದಾದವು. ಆದರ್ಶ ತಂದೆ, ತಾಯಿ, ಗಂಡ, ಹೆಂಡತಿ, ಅಣ್ಣ, ತಂಗಿ ಇವೆಲ್ಲವೂ ಚಲನಚಿತ್ರದಂತೆ ಇರಬೇಕು ಎಂದು ಬಯಸುತ್ತಿದ್ದರು.

ಹಣ ಮತ್ತು ಕೀರುತಿಗಾಗಿಯೇ ಹಂಬಲಿಸುವ ಚಲನಚಿತ್ರರಂಗ ಇಂದು 'ಚಿತ್ರೋದ್ಯಮ'ವಾಗಿ ಸ್ಥಾಪಿತಗೊಂಡಿದೆ. ಎಲ್ಲವನ್ನೂ ಹಣದ ಮೂಲಕವೇ ನಿರ್ಧರಿಸಲಾಗುತ್ತಿದೆ. ತೆರೆಯ ಮೇಲೆ ಇಷ್ಟೊಂದು ಹಿಂಸೆ, ರಕ್ತಪಾತ, ಭೀಕರ ಹತ್ಯೆಯಂಥ ದೃಶ್ಯಗಳನ್ನು ಯಾವ ಎಗ್ಗೂ ಇಲ್ಲದೆ ತೋರಿಸುತ್ತಿದ್ದಾರೆ. ಮನುಷ್ಯರನ್ನು ಕೊಲ್ಲಲು ಬಳಸುವ ಆಯುಧಗಳು, ಹೆಣ್ಣಿನ ಮಾನಭಂಗ ಮಾಡುವ ದೃಶ್ಯಗಳನ್ನು ನೋಡಲು ಹಾಗೂ ಕೊಲ್ಲುವ ಬಗೆಗಳನ್ನು ನೋಡಿದರೆ ಎದೆ ಝಲ್ಲೆನ್ನುತ್ತದೆ. ನಮ್ಮ ಕಣ್ಣುಗಳು ತಾನೇ ತಾನಾಗಿ ಮುಚ್ಚಿಕೊಳ್ಳುತ್ತವೆ. ಇವೆಲ್ಲ ಅನಿವಾರ್ಯವೆ? ಅರವತ್ತರ ದಶಕದಲ್ಲಿ ಕುಟುಂಬವೇ ಕೇಂದ್ರವಾಗಿದ್ದ ಚಲನಚಿತ್ರಗಳ ಜಾಗದಲ್ಲಿ ಇಂದು ಹಿಂಸೆ ಮತ್ತು ಲೈಂಗಿಕತೆ ಸ್ಥಾನಪಡೆದಿದೆ. ಇದಕ್ಕೆ ಕಾರಣ ಏನು ಎಂದು ನಿರ್ದೇಶಕರನ್ನು ಕೇಳಿದರೆ 'ಜನ ಕೇಳುತ್ತಾರೆ' ಎನ್ನುವ ಸಿದ್ಧಮಾಡಿದ ಮಾತೊಂದು ಕೇಳಿಬರುತ್ತದೆ! ಹಾಗಾದರೆ ಜನ ಇದನ್ನೆಲ್ಲಾ ಬೇಕೆಂದು ನಿರ್ದೇಶಕರಲ್ಲಿ ಒತ್ತಾಯಿಸುತ್ತಾರೆಯೆ? ವ್ಯಕ್ತಿಗಳು ತಮ್ಮನ್ನು ಸತ್ಯವಂತರೆಂದು, ಪ್ರಾಮಾಣಿಕರೆಂದು ಹೇಳಿಕೊಂಡು ನಟಿಸುತ್ತಾರೆ. ಆದರೆ ನಟಿಸುವಾಗ ಅರಿವಿಲ್ಲದಂತೆಯೇ ಅವರೊಳಗಿನ ವಿಕೃತ ಮನಸ್ಸು ಹೊರಗೆ ಇಣುಕುತ್ತಿರುತ್ತದೆ. ಕಲೆ ಸಮಾಜದ ಪ್ರತಿಬಿಂಬ ಎಂಬ ಮಾತನ್ನು ಹೇಳಲಾಗುತ್ತಿತ್ತು. ಆದರೆ ಇಂದು ಚಲನಚಿತ್ರದಲ್ಲಿರುವಂತೆ ಸಮಾಜ ಎನ್ನುವಂತಾಗಿದೆ! ಆದ್ದರಿಂದ ಸಮಾಜದಲ್ಲಿ ಕಂಡು ಕೇಳರಿಯದ ಹಿಂಸೆ, ಹಾಡುಹಗಲೇ ನಡೆಯುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯ ಕಣ್ಣಿಗೆ ರಾಚುತ್ತಿದೆ. ಇವುಗಳ ಕೆಡುಕಿನ ಮೂಲ ಇರುವುದು ಕಲೆಯಲ್ಲಲ್ಲ! ನಟನಟಿಯರಲ್ಲಲ್ಲ! ಅದು ಇರುವುದು ಚಿತ್ರದ ಎಲ್ಲಾ ಸೂತ್ರಗಳನ್ನು ಹಿಡಿದಿರುವ ನಿರ್ದೇಶಕನ ಬಳಿಯಲ್ಲಿ.

ಈಚೆಗೆ ಚಲನಚಿತ್ರವೊಂದರ ಹಾಡಿನಲ್ಲಿ ಬಳಕೆಯಾಗಿರುವ ಸಭ್ಯವಲ್ಲದ ಭಾಷೆಯ ಬಗ್ಗೆ ಎದ್ದಿರುವ ವಿವಾದ ಈ ಬಗೆಯ ಪ್ರಶ್ನೆಯನ್ನು ನಮ್ಮ ಮುಂದಿಟ್ಟಿದೆ. 'ಇಂದು ಚಲನಚಿತ್ರ ಉದ್ಯಮದ ಪರಿಸ್ಥಿತಿಯನ್ನು ಸ್ಥೂಲವಾಗಿ ನೋಡಿದರೆ ಸಾಕು ಅನೇಕ ಆಘಾತಕಾರಿ ಸತ್ಯಗಳು ಕಂಡುಬರುತ್ತವೆ. ಭೂಗತ ಜಗತ್ತಿನೊಂದಿಗೆ ಸಂಪರ್ಕ ಹೊಂದಿರುವುದು.. ನಾನಾ ತರಹದ ಹೂಡಿಕೆದಾರರ ಇರುವಿಕೆ, ಭೂಗತ ಜಗತ್ತಿನ ಬಗ್ಗೆ ಚಲನಚಿತ್ರಗಳನ್ನು ತಯಾರಿಸುವುದು ಮತ್ತು ಇತರ ಭಾಷೆಗಳ ಚಲನಚಿತ್ರಗಳ ಪುನರ್ನಿರ್ಮಾಣ ಮಾಡುವುದು ಇಂದಿನ ಸ್ಥಿತಿಯಲ್ಲಿ ಪ್ರಬಲವಾಗಿರುವಾಗ ಕನ್ನಡ ಸಿನೆಮಾದ ಸಂಸ್ಕೃತಿ ಎಂತಹ ದಯನೀಯ ಸ್ಥಿತಿಯಲ್ಲಿದೆ ಎಂಬುದು ಸ್ಪಷ್ಟವಾಗುತ್ತದೆ' (ಎನ್. ಮನು ಚಕ್ರವರ್ತಿ). ಹಿಂಸೆ ಮತ್ತು ಲೈಂಗಿಕತೆಯ ದೃಶ್ಯಗಳನ್ನು ತೋರಿಸುವ ಮೂಲಕ ಸಮಾಜದ ಅಭಿರುಚಿಯನ್ನು ಪಾತಾಳಕ್ಕೆ ತಳ್ಳುತ್ತಿರುವ, ಸಾಮಾಜಿಕ ಹೊಣೆಗಾರಿಕೆ ಅರಿತಿಲ್ಲದ ಕೆಲವೇ ಸಿನಿಮಾ ನಿರ್ದೇಶಕರಿಂದ ನಾವು ಮತ್ತು ನಮ್ಮ ಮುಂದಿನ ಪೀಳಿಗೆ ಕೊಚ್ಚಿಹೋಗುವುದನ್ನು ಉಳಿಸಿಕೊಳ್ಳಬೇಕಾಗಿದೆ.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಯಾವಾಗ ಮೌನದಿಂದಿರಬೇಕು ಎಂಬುದನ್ನು ತಿಳಿಯದವನಿಗೆ ಯಾವಾಗ ಮಾತನಾಡಬೇಕು ಎಂಬುದೂ ತಿಳಿಯುವುದಿಲ್ಲ.
  —ಸೈರಸ್
- ಹೃದಯವಂತಿಕೆ ಇಲ್ಲದಿದ್ದರೆ, ಬುದ್ಧಿವಂತಿಕೆ ಎಷ್ಟಿದ್ದರೂ ಪ್ರಯೋಜನವಾಗದು.
  —ಎಡ್ವರ್ಡ್ ಯಂಗ್
- ಕೆಲವು ಸಲ ಸಣ್ಣಪುಟ್ಟ ಉಪಕಾರಗಳೂ ಒಳ್ಳೆಯ ನಡವಳಿಕೆಯನ್ನು ಮೂಡಿಸುತ್ತವೆ.
  —ಎಮರ್ಸನ್
- ಕಾಮವಿದ್ದವನಿಗೆ ರಾಮನಿಲ್ಲ, ರಾಮನಿದ್ದವನಿಗೆ ಕಾಮವಿಲ್ಲ; ಕಾಮವನ್ನು ಗೆದ್ದವನು ರಾಮನನ್ನು ಗೆಲ್ಲಬಲ್ಲ.
  —ಓಶೋ
- ಯಾವ ವಿಶ್ವವಿದ್ಯಾಲಯವೂ ಕಲಿಸಲಾರದಷ್ಟು ಪಾಠವನ್ನು ಬಡತನ ಕಲಿಸುತ್ತದೆ.
  —ಅನಕೃ
- ಸತ್ಯಕ್ಕಾಗಿ ಯಾವುದನ್ನಾದರೂ ತ್ಯಾಗ ಮಾಡಿ. ಆದರೆ ಸತ್ಯವನ್ನು ಮಾತ್ರ ತ್ಯಾಗ ಮಾಡಬೇಡಿ.
  —ಸ್ವಾಮಿ ವಿವೇಕಾನಂದ
- ಸುಖದಲ್ಲೂ ಭಯ, ಅಪಾಯ ಇದೆ. ಕಷ್ಟದಲ್ಲೂ ಹಿತ, ಭರವಸೆ ಇದೆ.
  —ಫ್ರಾನ್ಸಿಸ್ ಬೇಕನ್